ಶ್ರೀ ಎಸ್.ಎ. ರಾಮದಾಸ್ : ಎಲ್ಲಾ ಔಷಧಗಳನ್ನು ಮತ್ತು ಬಿಲ್‌ಗಳನ್ನು ಅವರು ಕೊಟ್ಟಿರುವಂಥ ಬಿಲ್ ಮತ್ತು ನಮ್ಮ ಔಷಧಗಳಿಗೆ ಅವರು ಕೊಟ್ಟಂಥ ಬಿಲ್‌ಗಳು ಎಲ್ಲವನ್ನೂ ತಮಗೆ ಕಳುಹಿಸಿಕೊಡುತ್ತಿದ್ದೇನೆ. ಇಂದೇ ಇದರ ಬಗ್ಗೆ ಬೇಕಾದರೆ ತನಿಖೆಯಾಗಲಿ.

ಅಧ್ಯಕ್ಷರು : ಎರಡನ್ನೂ compare ಮಾಡಿ, I will call the Drug Controller also. I will take a decision ಸಾಕು, ಇದನ್ನು ಮುಕ್ತಾಯ ಮಾಡೋಣ. ಎರಡೂ ಕಡೆಯವರನ್ನು ಕರೆಸಿ ಮಾತನಾಡೋಣ.

6. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು:

1. ವಿಷಯ : ದೂಧ್‌ಗಂಗಾ ಮತ್ತು ಕೃಷ್ಣ ನದಿಯಿಂದ ಮರಳು ತೆಗೆಯುತ್ತಾರೆಂದು ಚಿಕ್ಕೋಡಿ ತಹಶೀಲ್ದಾರ್‌ರವರು ಪ್ರತಿಯೊಂದು ಬೋಟ್ ಮೇಲೆ 2 ಲಕ್ಷ ರೂಪಾಯಿ ದಂಡವನ್ನು ವಿಧಿಸಿರುವ ಕುರಿತು.

ಶ್ರೀ ಹುಕ್ಕೇರಿ ಪ್ರಕಾಶ ಬಾಬಣ್ಣ (ಚಿಕ್ಕೋಡಿ – ಸದಲಗ) : ಮಾನ್ಯ ಅಧ್ಯಕ್ಷರೆ, ದೂಧ್‌ಗಂಗಾ ಮತ್ತು ಕೃಷ್ಣ ನದಿಯಿಂದ ಮರಳು ತೆಗೆಯುತ್ತಾರೆಂದು ಚಿಕ್ಕೋಡಿ ತಹಶೀಲ್ದಾರ್‌ರವರು ಪ್ರತಿಯೊಂದು ಬೋಟ್ ಮೇಲೆ 2 ಲಕ್ಷ ರೂಪಾಯಿ ದಂಡವನ್ನು ವಿಧಿಸಿದ್ದಾರೆ. ಅದರ ಬಗ್ಗೆ ಶೂನ್ಯವೇಳೆಯಲ್ಲಿ ನಾನು ಮಾನ್ಯ ಲೋಕೋಪಯೋಗಿ ಸಚಿವರ ಗಮನ ಸಳೆಯುತ್ತಾ ಅದಕ್ಕೆ ಅವರು ಸ್ಪಷ್ಟೀಕರಣ ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) : ತಾವು ಶೂನ್ಯವೇಳೆಯಲ್ಲಿ ಈ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದೀರಿ. ಇದು ಇವತ್ತು ನನಗೆ ಸಿಕ್ಕಿದೆ. ಇದಕ್ಕೆ ನಾಳೆ ಉತ್ತರ ತರಿಸಿ ತಮಗೆ ಕಳುಹಿಸಿಕೊಡುತ್ತೇನೆ.

ಅಧ್ಯಕ್ಷರು : ನಾಳೆ ಉತ್ತರ ಕೊಡುತ್ತಾರಂತೆ, ಈಗ ಹೊಳೆಯಲ್ಲಿ ನೀರಿದೆ. 2–2 ಲಕ್ಷ ರೂಪಾಯಿ ಫೈನ್ ಹಾಕುತ್ತಾರೆಂದು ಹೇಳುತ್ತಾರೆ. ಈಗ ಎಲ್ಲಿ ಬೋಟ್‌ನಲ್ಲಿ ತೆಗೆಯಲ್ಲಿಕ್ಕಾಗುತ್ತದೆ? ಅವರಿಗೆ detail ಆಗಿ ಉತ್ತರ ಕೊಟ್ಟುಬಿಡಿ.

ಶ್ರೀ ಸಿ.ಎಂ. ಉದಾಸಿ : ಆಯಿತು.

ಅಧ್ಯಕ್ಷರು : ನಾಳೆ ಉತ್ತರ ಕೊಡುತ್ತೇನೆಂದು ಹೇಳಿದ್ದಾರೆ. ನಾನೂ ಹೇಳಿದ್ದೇನೆ.

ಶ್ರೀ ಹುಕ್ಕೇರಿ ಪ್ರಕಾಶ್ ಬಾಬಣ್ಣ : ಕೃಷ್ಣಾ ನದಿಗೆ, ದೂಧ್‌ಗಂಗಾ ನದಿಗೆ ಸುಮಾರು 30 ಫೀಟ್ ಆಂದರೆ 9 ಅಡಿ ನೀರು ಹರಿಯುತ್ತದೆ. ಈಗ ಆ ನದಿಯಲ್ಲಿ ಮರಳು ತೆಗೆಯುವುದಕ್ಕೆ ಸಾಧ್ಯವಿದೆ ಎಂದು ಹೇಳುತ್ತಾರೆ.

ಅಧ್ಯಕ್ಷರು : ನಾಳೆ ಉತ್ತರ ಕೊಡಲಿ.

ಶ್ರೀ ಹುಕ್ಕೇರಿ ಪ್ರಕಾಶ ಬಾಬಣ್ಣ : ಅಲ್ಲಿ ಬೋಟ್‌ನಲ್ಲಿ ಮರಳು ತೆಗೆಯುವುದಕ್ಕೆ ಸಾಧ್ಯವಿದೆಯೇ? ನೀವೇ ಹೇಳಿ.

ಅಧ್ಯಕ್ಷರು : ನಾಳೆ ಅವರು ಉತ್ತರ ಕೊಡಲಿ.

ಶ್ರೀ ಸಿ.ಎಂ. ಉದಾಸಿ : ಈ ಆಜ್ಞೆಯನ್ನು suo-moto ಮಾಡಿದ್ದಲ್ಲ. ನ್ಯಾಯಾಲಯದ ತೀರ್ಪಿನ ಪ್ರಕಾರ ಆಗಿದೆ.

ಅಧ್ಯಕ್ಷರು : ಆಯಿತು, ನಾಳೆ ಉತ್ತರ ಕೊಡಿ.

ಶ್ರೀ ಸಿ.ಎಂ. ಉದಾಸಿ : ನಾಳೆ ಉತ್ತರ ಕಳುಹಿಸಿಕೊಡುತ್ತೇನೆ.

ಶ್ರೀ ಹುಕ್ಕೇರಿ ಪ್ರಕಾಶ ಬಾಬಣ್ಣ : ನ್ಯಾಯಾಲಯದ ತೀರ್ಪು ತೆಗೆದುಕೊಂಡು ನಾವೇನು ಮಾಡುವುದು? ನ್ಯಾಯಾಲಯದ ತೀರ್ಪು ನಮಗೆ ಬೇಕಾಗಿಲ್ಲ. ತಾವು ಮಾನವೀಯತೆಯ ದೃಷ್ಟಿಯಿಂದ ಅದರ ಬಗ್ಗೆ ಯಾವ ನಿರ್ಣಯ ತೆಗೆದುಕೊಳ್ಳುತ್ತೀರಿ ಎನ್ನುವ ಬಗ್ಗೆ ನಾವು ಸಭಾಧ್ಯಕ್ಷರ ಗಮನಕ್ಕೆ ತಂದಿದ್ದೇವೆ. ದಯವಿಟ್ಟು ನೀವು ಅದರ ಬಗ್ಗೆ ಹೇಳಿಕೆ ಕೊಡಬೇಕು. ನ್ಯಾಯಾಲಯದ ತೀರ್ಪು ತೆಗೆದುಕೊಂಡು ಏನು ಮಾಡುವುದು?

ಅಧ್ಯಕ್ಷರು : ಈ ವಿಷಯವನ್ನು ನಾನು ಈಗ ಮುಗಿಸಿದ್ದೇನೆ. ನಾಳೆ ತೆಗೆದುಕೊಳ್ಳೋಣ.

2. ವಿಷಯ: ರಾಜ್ಯದಲ್ಲಿ ಹರಡುತ್ತಿರುವ ಡೆಂಗ್ಯು ಜ್ವರದ ಕುರಿತು.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಡೆಂಗ್ಯು ಜ್ವರ ರಾಜ್ಯದ ಅನೇಕ ಭಾಗಗಳಲ್ಲಿ ಹರಡಿದೆ. ಅನೇಕ ಜನರು ಈ ಜ್ವರಕ್ಕೆ ತುತ್ತಾಗಿ ತೊಂದರೆ ಅನುಭವಿಸುತ್ತಿದ್ದಾರೆ. ನಾನು ಇವತ್ತು